ಕರ್ನಾಟಕ ವಿಧಾನಸಭೆ

ಶನಿವಾರ 27ನೇ ಮಾರ್ಚ್ 1999ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9.50 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರಾದ (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಪಶುಸಂಗೋಪನೆ ವಿಶ್ವವಿದ್ಯಾಲಯ.

43(553) ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) :— ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಎರಡು ವಿಶ್ವವಿದ್ಯಾಲಯಗಳ ಅಡಿಯಲ್ಲಿ ಬರುತ್ತಿರುವ ಪಶುಸಂಗೋಪನೆ ಭೋದಿಸುವ ಮಹಾವಿದ್ಯಾಲಯಗಳ ಹಾಗೂ ಡಿಪ್ಲೋಮೊ ಕಾಲೇಜುಗಳ ಮತ್ತು ಜೆ.ಓ.ಸಿ. ಬೋಧಿಸುವ ಕಾಲೇಜುಗಳ ಸಂಖ್ಯೆ ಎಷ್ಟು;

ಆ) ರಾಜ್ಯದಲ್ಲಿ ಪಸುಸಂಗೋಪನೆ ವಿಶ್ವವಿದ್ಯಾಲಯದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :—

ಅ) ಬೆಂಗಳೂರು ಹಾಗೂ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಅಡಿಯಲ್ಲಿ ಬೆಂಗಳೂರು ಪಶುವೈದ್ಯಕೀಯ ಮಹಾವಿದ್ಯಾನಿಲಯ ಹಾಗೂ ಬೀದರ್ ಪಶು ವೈದ್ಯಕೀಯ ಮಹಾವಿದ್ಯಾನಿಲಯ ಹೀಗೆ 2 ಕಾಲೇಜುಗಳು ಕಾರ್ಯ ನಿರ್ವಹಿಸಿರುತ್ತಿವೆ. ಈ ಮೇಲ್ಕಂಡ ವಿಶ್ವವಿದ್ಯಾಲಯಗಳಲ್ಲಿ ಡಿಪ್ಲೋಮ ಕಾಲೇಜುಗಳು ಮತ್ತು ಜೆ.ಓ.ಸಿ. ಬೋಧಿಸುವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ.

ಆ) ಬಂದಿದೆ.

ಇ) ಈ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಚಂದ್ರಕಾಂತ ಬೆಲ್ಲದ್ :— ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಕರ್ನಾಟಕ ರಾಜ್ಯದಲ್ಲಿ ಎರಡು ಕೃಷಿ ವಿಶ್ವವಿದ್ಯಾನಿಲಯಗಳಿದ್ದು, ಅವುಗಳ ಅಧೀನದಲ್ಲಿ ಕೇವಲ ಎರಡೇ ಎರಡು ಪಶುವೈದ್ಯಕೀಯ ಮಹಾ ವಿದ್ಯಾನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಇಡೀ ಭಾರದ ದೇಶದಲ್ಲೇ ಇತರ ರಾಜ್ಯಗಳಿಗಿಂತ ಪಶು ಸಂಗೋಪನಾ ಬೆಳವಣಿಗೆಗೆ ಉತ್ತಮ ಹವಾಮಾನವನ್ನು ಹೊಂದಿರತಕ್ಕ ರಾಜ್ಯ ನಮ್ಮದಾಗಿದೆ. ಆ ದೃಷ್ಟಿಯಿಂದ ಇವತ್ತು ಮಾನವ ಸಂಪನ್ಮೂಲವನ್ನು ಬಳಸಿಕೊಳ್ಳಲಿಕ್ಕೆ, ನಿಸರ್ಗ ಸಂಪನ್ಮೂಲವನ್ನು ಬಳಸಿಕೊಳ್ಳಲಿಕ್ಕೆ, ಸ್ವಾವಲಂಬಿಯಾದಂತಹ ಸಮಾಜವನ್ನು ನಿರ್ಮಾಣ ಮಾಡಲಿಕ್ಕೆ ಮೇಲ್ಕಂಡ ವಿಶ್ವವಿದ್ಯಾನಿಲಯಗಳಲ್ಲಿ ಡಿಪ್ಲೋಮಾ ಮತ್ತು ಜೆ.ಓ.ಸಿ. ಬೋಧಿಸುವಂತಹ ಶಿಕ್ಷಣದ ಅವಶ್ಯಕತೆಯೂ ಕೂಡ ನಮ್ಮ ರಾಜ್ಯಕ್ಕಿದೆ ಎಂದರೆ ತಪ್ಪಾಗಲಾರದು. ಆ ದಿಸೆಯಲ್ಲಿ ತಾವೇನು ಕ್ರಮ ಕೈಗೊಳ್ಳುತ್ತಿದ್ದೀರಿ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಉತ್ತಮ ಹವಾಗುಣವನ್ನು ಹೊಂದಿರುವಂತಹ ರಾಜ್ಯದಲ್ಲಿ ಪ್ರತ್ಯೇಕವಾದಂತಹ ಪಶುಸಂಗೋಪನಾ ವಿಶ್ವವಿದ್ಯಾನಿಲಯದ ಅವಶ್ಯಕತೆ ಇದೆ. ಗುಜರಾತ್ ಮುಂತಾದ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಉತ್ತಮವಾದಂತಹ ಹವಾಗುಣವನ್ನು ಹೊಂದಿದೆ. ಆ ದೃಷ್ಟಿಯಿಂದ ರಾಜ್ಯದಲ್ಲಿ ಪಶು ಸಂಗೋಪನಾ ವಿಶ್ವವಿದ್ಯಾನಿಲಯದ ಸ್ಥಾಪನೆ ಮಾಡುವುದು ಅವಶ್ಯಕವಾಗಿದೆ. ಸರ್ಕಾರ ಈ ದಿಸೆಯಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ನಾನು ತಮ್ಮ ಮೂಲಕ ಅವರನ್ನೂ ಕೇಳುತ್ತಿದ್ದೇನೆ.

ಶ್ರೀ ಬಿ.ಬಿ. ನಿಂಗಯ್ಯ :— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಮೊದಲನೆಯ ಪ್ರಶ್ನೆಗೆ ಉತ್ತರಿಸುವುದಾದರೆ, ರಾಜ್ಯದಲ್ಲಿ ಎರಡು ಕೃಷಿ ವಿಶ್ವವಿದ್ಯಾನಿಲಯಗಳಿವೆ. ಅವುಗಳ ಅಧೀನದಲ್ಲಿ ಬೆಂಗಳೂರು ಪಶುವೈದ್ಯಕೀಯ ಮಹಾ ವಿದ್ಯಾನಿಲಯ ಮತ್ತು ಬೀದರ್ ಪಶು ವೈದ್ಯಕೀಯ ಮಹಾವಿದ್ಯಾನಿಲಯಗಳೆಂಬ ಎರಡು ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಎರಡೂ ಕಾಲೇಜುಗಳಲ್ಲಿ ಪ್ರತಿ ವರ್ಷ ನೂರು ಜನ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಅವಕಾಶ ಇದೆ. ಪ್ರತಿ ಐದು ವರ್ಷಕ್ಕೊಮ್ಮೆ ಸುಮಾರು 100 ಜನ ಪದವೀಧರರು ಈ ಕಾಲೇಜುಗಳಿಂದ ಹೊರ ಬರುತ್ತಿದ್ದಾರೆ. ತಾವು ಹೇಳಿದಂತೆ ಇವತ್ತು ಪಶುಸಂಗೋಪನೆ ದಿನೇದಿನೇ ಒಂದು ಉದ್ಯಮವಾಗಿ ಬೆಳೆಯುತ್ತಿದೆ. ಪಶುವೈದ್ಯಕೀಯ ಕಾಲೇಜುಗಳು ಹೆಚ್ಚು ಬೇಕೆಂಬ ಬೇಡಿಕೆಗಳು ಕೂಡ ಬರುತ್ತಿವೆ. ಈ ಕಾಲೇಜುಗಳ ಜೊತೆಗೆ ಡಿಪ್ಲೋಮಾ ಮತ್ತು ಜೆಓಸಿ ಕೋರ್ಸ್‌ಗಳನ್ನು ಆರಂಭಿಸುವ ಆಲೋಚನೆ ಸರ್ಕಾರದ ಮುಂದಿದೆಯೇ? ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ....

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಅಧ್ಯಕ್ಷರೇ, ತಾವೇನು ತಪ್ಪು ತಿಳಿದುಕೊಳ್ಳುವುದಿಲ್ಲ ಎನ್ನುವುದಾದರೆ ಒಂದು ಮಾತನ್ನು ಹೇಳುತ್ತೇನೆ. ಈ ಪ್ರಶ್ನೆಯನ್ನು ಮಾನ್ಯ ಕೃಷಿ ಮತ್ತು ತೋಟಗಾರಿಕಾ ಸಚಿವರು ಉತ್ತರಿಸಬೇಕಾಗಿತ್ತು ಎಂದೆನಿಸುತ್ತದೆ. ಈ ಪ್ರಶ್ನೆಗೆ ಸಂಬಂಧಪಟ್ಟ ವಿಷಯ ಅವರ ಖಾತೆಯ ಆಡಳಿತಾತ್ಮಕ ಕಂಟ್ರೋಲ್‌ಗೆ ಬರುತ್ತದೆ.

ಇದೊಂದು ಕೆಟ್ಟ ಸಂಪ್ರದಾಯವಾಗುವುದು ಬೇಡ. ಕೃಷಿ ವಿಶ್ವವಿದ್ಯಾನಿಲಯಗಳು ಯಾವಾಗಲೂ ಮಾನ್ಯ ಕೃಷಿ ಖಾತೆ ಸಚಿವರ ಅಧೀನದಲ್ಲೇ ಬರುತ್ತವೆ.

ಅಧ್ಯಕ್ಷರು :— ಪಶುಸಂಗೋಪನಾ ಕುರಿತ ವಿಷಯ ಇದರಲ್ಲಿದೆ. ಮಾನ್ಯ ಪಶುಸಂಗೋಪನಾ ಸಚಿವರು ಅವರ ಇಲಾಖೆಗೆ ಸಂಬಂಧಪಟ್ಟಂತೆ ಉತ್ತರಿಸಲಿ ಬಿಡಿ.

ಶ್ರೀ ಬಿ.ಬಿ. ನಿಂಗಯ್ಯ :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಡಿಪ್ಲೋಮಾ ಮತ್ತು ಜಿ.ಓ.ಸಿ. ಕೋರ್ಸ್‌ಗಳನ್ನು ಆರಂಭಿಸಬೇಕೆಂಬ ಒಂದು ಒಳ್ಳೆಯ ಸಲಹೆಯನ್ನು ಸರ್ಕಾರಕ್ಕೆ ನೀಡಿದ್ದಾರೆ. ಸರ್ಕಾರ ಆ ವಿಚಾರವನ್ನು ಪರಿಶೀಲನೆ ಮಾಡುತ್ತದೆ ಎಂದು ನಾನು ತಿಳಿಸಬಯಸುತ್ತೇನೆ. ವಿಶ್ವವಿದ್ಯಾನಿಲಯದ ಪ್ರೋ-ಚಾನ್ಸಲರ್ ಆದ ಹಾಗೂ ಹಿರಿಯ ಸಚಿವರಾಗಿರತಕ್ಕ ಮಾನ್ಯ ಬೈರೇಗೌಡರ ಜೊತೆಯಲ್ಲಿ ನಾನು ಈ ವಿಚಾರವಾಗಿ ಮಾತನಾಡಿ ಆದಷ್ಟು ಬೇಗ ಈ ಕೋರ್ಸ್‌ಗಳನ್ನು ತೆರೆಯುವುದರ ಬಗ್ಗೆ ಆಲೋಚನೆ ಮಾಡುತ್ತೇನೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಬಯಸುತ್ತೇನೆ.

ಶ್ರೀ ಚಂದ್ರಕಾಂತ್ ಬೆಲ್ಲದ್ :— ಮಾನ್ಯ ಅಧ್ಯಕ್ಷರೇ, ನಾನು ಪಶು ಸಂಗೋಪನಾ ವಿಶ್ವವಿದ್ಯಾನಿಲಯವನ್ನು ತೆರೆಯುವುದರ ಬಗ್ಗೆ ಕೂಡ ಕೇಳಿದ್ದೆ. ಅದರ ಬಗ್ಗೆ ಸಂಬಂಧಿಸಿದ ಮಂತ್ರಿಗಳು ಚಿಂತನೆ ಮಾಡಿದ್ದಾರೆಯೇ?

ಅಧ್ಯಕ್ಷರು :— ಮಾನ್ಯ ಬೆಲ್ಲದ್‌ರವರೇ, ತಾವು ಆಮೇಲೆ ಸ್ವಲ್ಪ ನನ್ನ ಕೊಠಡಿಗೆ ಬನ್ನಿ, ನನಗೆ ಈ ವಿಷಯ ಬಹಳ ಇಷ್ಟವಾದುದು. ನಾವಿಬ್ಬರೂ ಇದರ ಬಗ್ಗೆ ಚರ್ಚೆ ಮಾಡೋಣ.

ರಾಜ್ಯದಲ್ಲಿ ಆಶ್ರಯ ಯೋಜನೆ.

49(571) ಶ್ರೀ ಬಿ. ಶಿವರಾಮು (ಗಂಡಸಿ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಆಶ್ರಯ ಯೋಜನೆಯ ಮನೆಗಳನ್ನು ತಾಲ್ಲೂಕ್‌ವಾರು ಅಥವಾ ಕ್ಷೇತ್ರವಾರು ಹಂಚಲಾಗುವುದೇ;

ಆ) ಮನೆ ಹಂಚಿಕೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳು ಯಾವುವು?